ಇ) ಮಾನ್ಯ ಉಪಲೋಕಾಯುಕ್ತರ ಹುದ್ದೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಹೌದು

ಆ) ಮತ್ತು ಇ) ಮಾನ್ಯ ಉಪಲೋಕಾಯುಕ್ತರ ಹುದ್ದೆಯನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಭ್ರಷ್ಟ ಅಧಿಕಾರಿಗಳ ಮೇಲೆ ನಡೆಸಿರುವ ಲೋಕಾಯುಕ್ತರ ದಾಳಿಯ ವಿವರದ ಬಗ್ಗೆ

82 (299) ಶ್ರೀ ಸೋಮಶೇಖರ್ ಬಿ (ಮಳವಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಾಯುಕ್ತ ಕಾಯಿದೆ ಮತ್ತು ಭ್ರಷ್ಟಾಚಾರ ನಿರ್ಮೂಲನೆ ತಡೆ ಕಾಯಿದೆಯಡಿಯಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಐ ಎ ಎಸ್ ಐ ಪಿ ಎಸ್ ಹಾಗೂ ಕೆ ಎ ಎಸ್ ನ ಎಷ್ಟು ಅಧಿಕಾರಿಗಳ ಮನೆ ಹಾಗೂ ಕಛೇರಿ ಮೇಲೆ ದಾಳಿ ಮಾಡಲಾಗಿದೆ ವಿವರಗಳನ್ನು ನೀಡುವುದು,

ಆ) ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ವರದಿಯನ್ನು ಕರ್ನಾಟಕ ಲೋಕಾಯುಕ್ತರು ಸರ್ಕಾರಕ್ಕೆ ಸಲ್ಲಿಸಿ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದಾರೆ

ಇ) ಎಷ್ಟು ಪ್ರಕರಣದಲ್ಲಿ ಬಿ ರಿಪೋರ್ಟ್‌ನ್ನು ಸಲ್ಲಿಸಲಾಗಿದೆ ವಿವರಗಳನ್ನು ನೀಡುವುದು

ಈ) ಎಷ್ಟು ಪ್ರಕರಣಗಳು ಈ ಎರಡೂ ಕಾಯಿದೆಯಡಿಯಲ್ಲಿ ಲೋಕಾಯುಕ್ತ ವ್ಯಾಪ್ತಿಯಲ್ಲಿ ಬಾಕಿ ಉಳಿದಿದೆ

ಉ) ಈ ಎಲ್ಲಾ ಪ್ರಕರಣಗಳನ್ನು ಇತ್ಯರ್ಥಪಡಿಸಲು ಲೋಕಾಯುಕ್ತಕ್ಕೆ ಕಾಲಮಿತಿಯನ್ನು ವಿಧಿಸಿದೆಯೇ

ಊ) ಎಷ್ಟು ಲೋಕಾಯುಕ್ತ ಶಿಫಾರಸ್ಸು ಸರ್ಕಾರದ ಮಟ್ಟದಲ್ಲಿ ಬಾಕಿ ಇವೆ

ಋ) ಸರ್ಕಾರವು ಈ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಕಾಲಮಿತಿಯನ್ನು ವಿಧಿಸಿದೆಯೇ ಹಾಗಿದ್ದಲ್ಲಿ ಎಷ್ಟು ದಿನದಲ್ಲಿ ಇತ್ಯರ್ಥ ಪಡಿಸಲಾಗುವುದು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಪಿ ಸಿ ಕಾಯ್ದೆ — ಕ ಲೋ ಕಾಯ್ದೆ ಶೋಧನಾ ವಾರೆಂಟ್

ಐ ಎ ಎಸ್–2	1
ಐ ಪಿ ಎಸ್–ಇಲ್ಲ	ಇಲ್ಲ
ಐ ಎಫ್ ಎಸ್–1	ಇಲ್ಲ
ಕೆ ಎ ಎಸ್–7	ಇಲ್ಲ

(ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಐ ಎ ಎಸ್– 1

ಐ ಪಿ ಎಸ್– ಇಲ್ಲ

ಐ ಎಫ್ ಎಸ್– ಇಲ್ಲ

ಕೆ ಎ ಎಸ್ – 4

ಇ) 1 ಕೆ ಎ ಎಸ್ ಅಧಿಕಾರಿ
(ವಿವರ ಅನುಬಂಧದಲ್ಲಿ ಒದಗಿಸಿದೆ)

ಈ)

ಪಿ ಪಿ ಕಾಯ್ದೆ	ಕ ಲೋ ಕಾಯ್ದೆ
ಐ ಎ ಎಸ್ –2	ಇಲ್ಲ
ಐ ಪಿ ಎಸ್– ಇಲ್ಲ	ಇಲ್ಲ
ಐ ಎಫ್ ಎಸ್–ಇಲ್ಲ	ಇಲ್ಲ
ಕೆ ಎ ಎಸ್–2	ಇಲ್ಲ

ಉ) ಇಲ್ಲ

ಊ) ಐ ಎ ಎಸ್–1 ಕೆ ಎ ಎಸ್–1

ಋ) ಹೌದು ಮೂರು ತಿಂಗಳೊಳಗೆ

ಅನುಬಂಧ

ವಿಧಾನ ಸಭೆ ಪ್ರಶ್ನೆ ಸಂಖ್ಯೆ. 299 ರ ಖಂಡ (ಆ) ಮತ್ತು (ಇ)

ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988 ರ ಅಡಿಯಲ್ಲಿ 1999 ರಿಂದ 2003 ರವರೆಗೆ ಈ ಕೆಳಕಂಡ 2 ಐ ಎ ಎಸ್ 1 ಐ ಎಫ್ ಎಸ್ ಹಾಗೂ 7 ಕೆ ಎ ಎಸ್ ಅಧಿಕಾರಿಗಳು ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯನ್ವಯ ಒಬ್ಬ ಐ ಎ ಎಸ್ ಅಧಿಕಾರಿಯವರ ಮನೆ ಮತ್ತು ಕಛೇರಿಗಳ ಮೇಲೆ ದಾಳಿ ನಡೆಸಲಾಗಿದೆ

ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1998ರ ಅಡಿ

1) ಶ್ರೀ ಐ ಆರ್ ಪೆರುಮಾಳ್, ಐ ಎ ಎಸ್
2) ಶ್ರೀ ಪಿ ಬಿ ರಾಮಮೂರ್ತಿ, ಐ ಎ ಎಸ್
3) ಶ್ರೀ ಎನ್ ಶಾಂತಪ್ಪ, ಐ ಎಫ್ ಎಸ್
4) ಶ್ರೀ ಎಂ ವೀರಭದ್ರಯ್ಯ, ಕೆ ಎ ಎಸ್
5) ಶ್ರೀ ಸಿ ಸೋಮಶೇಖರ್, ಕೆ ಎ ಎಸ್
6) ಶ್ರೀ ಕೆ ಎಂ ಚಂದ್ರೇಗೌಡ, ಕೆ ಎ ಎಸ್
7) ಶ್ರೀ ಎನ್ ವೈ. ಹೊಸಮನಿ, ಕೆ ಎ ಎಸ್
8) ಶ್ರೀ ಎ ಮರಿಗೌಡ, ಕೆ ಎ ಎಸ್
9) ಶ್ರೀ ಎಸ್ ಎಸ್ ಪಟ್ಟಣಶೆಟ್ಟಿ, ಕೆ ಎ ಎಸ್
10) ಶ್ರೀ ಎನ್ ಕೆ ಲಕ್ಷ್ಮಣ್, ಕೆ ಎ ಎಸ್

ಕರ್ನಾಟಕ ಲೋಕಾಯುಕ್ತ ಕಾಯಿದೆ ಅಡಿ ಶೋಧನಾ ವಾರೆಂಟ್

1) ಶ್ರೀ ಎಸ್ ಎಂ ರಾಜು, ಐ ಎ ಎಸ್

ಮೇಲಿನ 11 ಪ್ರಕರಣಗಳ ಪೈಕಿ ಈ ಕೆಳಗಿನಂತೆ 5 ಪ್ರಕರಣಗಳಲ್ಲಿ ಲೋಕಾಯುಕ್ತರು ಸರ್ಕಾರಕ್ಕೆ ವರದಿ ಕಳುಹಿಸಿರುತ್ತಾರೆ

1) ಶ್ರೀ ಎಸ್ ಎಂ ರಾಜು, ಐ ಎ ಎಸ್

2) ಶ್ರೀ ಕೆ ಎಂ ಚಂದ್ರೇಗೌಡ, ಕೆ ಎ ಎಸ್

3) ಶ್ರೀ ಎಸ್ ವೈ. ಹೊಸಮನಿ, ಕೆ ಎ ಎಸ್

4) ಶ್ರೀ ಎನ್ ಕೆ ಲಕ್ಷ್ಮಣ್, ಕೆ ಎ ಎಸ್

5) ಶ್ರೀ ಎಸ್ ಎನ್ ಪಟ್ಟಣಶೆಟ್ಟಿ, ಕೆ ಎ ಎಸ್

ಈ ಕೆಳಗಿನಂತೆ ಒಂದು ಪ್ರಕರಣದಲ್ಲಿ ಲೋಕಾಯುಕ್ತವು ನ್ಯಾಯಾಲಯಕ್ಕೆ ಬಿ ವರದಿ ಸಲ್ಲಿಸಿದೆ

1) ಶ್ರೀ ಎಂ ವೀರಭದ್ರಯ್ಯ, ಕೆ ಎ ಎಸ್

ಈ ಕೆಳಗಿನಂತೆ ಐದು ಪ್ರಕರಣಗಳಲ್ಲಿ ಲೋಕಾಯುಕ್ತದಲ್ಲಿ ತನಿಖೆಯಲ್ಲಿದೆ

1) ಶ್ರೀ ಐ ಆರ್ ಪೆರುಮಾಳ್, ಐ ಎ ಎಸ್

2) ಶ್ರೀ ಪಿ ಬಿ ರಾಮಮೂರ್ತಿ, ಐ ಎ ಎಸ್

3) ಶ್ರೀ ಎನ್ ಶಾಂತಪ್ಪ, ಐ ಎಫ್ ಎಸ್

4) ಶ್ರೀ ಸಿ ಸೋಮಶೇಖರ್, ಕೆ ಎ ಎಸ್

5) ಶ್ರೀ ಎ ಮರೀಗೌಡ, ಕೆ ಎ ಎಸ್

ಶ್ರೀ ಎಸ್ ವೈ. ಹೊಸಮನಿ, ಕೆ ಎ ಎಸ್ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಲೋಕಾಯುಕ್ತಕ್ಕೆ ಅನುಮತಿ ನೀಡಲಾಗಿದೆ ಶ್ರೀ ಕೆ ಎಂ ಚಂದ್ರೇಗೌಡ ಹಾಗೂ ಶ್ರೀ ಎಸ್ ಕೆ ಲಕ್ಷ್ಮಣ್ ಪ್ರಕರಣಗಳಲ್ಲಿ ಆರೋಪವು ಮೇಲ್ನೋಟಕ್ಕೆ ಸಾಬೀತಾಗದ ಕಾರಣ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿಯನ್ನು ನಿರಾಕರಿಸಲಾಗಿದೆ

ಈ ಕೆಳಕಂಡ ಪ್ರಕರಣಗಳಲ್ಲಿ ಲೋಕಾಯುಕ್ತದ ಶಿಫಾರಸ್ಸು ಸರ್ಕಾರದ ಪರಿಶೀಲನೆಯಲ್ಲಿದೆ

1) ಶ್ರೀ ಎಸ್ ಎಂ ರಾಜು ಐ ಎ ಎಸ್

2) ಶ್ರೀ ಎಸ್ ಎಸ್ ಪಟ್ಟಣಶೆಟ್ಟಿ, ಕೆ ಎ ಎಸ್

ಯಲಹಂಕ ಉಪನಗರಕ್ಕೆ ಕಛೇರಿ ಸಮಯದಲ್ಲಿ ಮಹಿಳಾ ವಿಶೇಷ ಬಸ್ ಸೌಲಭ್ಯ ಒದಗಿಸುವ ಬಗ್ಗೆ

84 (468) ಶ್ರೀ ಸುಬ್ಬಾರೆಡ್ಡಿ ಕೆ ಎನ್ (ಬಸವನಗುಡಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಲಹಂಕ 4ನೇ ಹಂತದಿಂದ ಬೆಳಿಗ್ಗೆ 09-00 ಗಂಟೆಗೆ ಪ್ರಾರಂಭಿಸುವ ಮಹಿಳಾ ವಿಶೇಷ ಬಸ್ಸನ್ನು 5ನೇ ಹಂತದಿಂದ ಪ್ರಾರಂಭಿಸಲು ಅಗತ್ಯವಾಗಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ

ಆ) ಅದೇ ಮಹಿಳಾ ವಿಶೇಷ ಬಸ್ಸನ್ನು ಸಾಯಂಕಾಲ 4ನೇ ಹಂತದಿಂದ 5ನೇ ಹಂತದವರೆಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದೇ

ಇ) ಕಛೇರಿಯ ಸಮಯದಲ್ಲಿ ಸುಮಾರು 08 ತಿಂಗಳಿನಿಂದ ವಿಧಾನಸೌಧದಿಂದ ಪ್ರಾರಂಭಿಸಿದ್ದ ಜಂಟಿ ವಾಹನ ಸೌಲಭ್ಯವನ್ನು ಸುಮಾರು 20 ದಿನಗಳಿಂದ ಸ್ಥಗಿತಗೊಳಿಸಲು ಕಾರಣಗಳೇನು

ಈ) ಜಂಟಿ ವಾಹನವು ಪ್ರಾರಂಭದಲ್ಲಿ ಭರ್ತಿಯಾಗಿ ಪ್ರಯಾಣಿಕರು ನಿಂತು ಪ್ರಯಾಣಿಸುವುದರಿಂದ ಜಂಟಿ ವಾಹನ ಅಥವಾ ಎರಡು ಬಸ್ಸುಗಳ ಸೌಲಭ್ಯವನ್ನು ಪುನ ಪ್ರಾರಂಭಿಸಿ